**ಅ.ದಾ. ಸಂಖ್ಯೆ: 202 / 2016**
**ಡಿ.ಡಬ್ಲ್ಯೂ -01**

**ದಿನಾಂಕಃ 21.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ವಾದಿಯ ಪರ ಶ್ರೀ. SJP. ವಕೀಲರಿಂದ :-**

ಈಗ ಸಾಕ್ಷಿಗೆ ಜನರಲ್ ಪವರ್ ಆಫ್ ಅಟಾರ್ನಿಯನ್ನು ತೋರಿಸಲಾಗಿ ಸದರಿ ಜನರಲ್ ಪವರ್ ಆಫ್ ಅಟಾರ್ನಿಯಲ್ಲಿ ಇರುವ ಮೊದಲನೆ ಪೋಟೋ 1ನೇ ಪ್ರತಿವಾದಿ , 2ನೇ ಪೋಟೋ 2ನೇ ಪ್ರತಿವಾದಿ , 3 ನೇ ಪೋಟೋ 3 ನೇ ಪ್ರತಿವಾದಿ ಮತ್ತು 4 ನೇ ಪೋಟೋ ನಿಮ್ಮದೆ ಹಾಗೂ 5 ನೇ ಪೋಟೋ 5 ನೇ ಪ್ರತಿವಾದಿಯದ್ದು ಹಾಗೂ ಪಕ್ಕದಲ್ಲಿ ಇರುವ ಪೋಟೋ ವಾದಿಯದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. **ಸದರಿ ಜನರಲ್ ಪವರ್ ಆಫ್ ಅಟಾರ್ನಿಯನ್ನು ನಿಪಿ-18 ಎಂದು ಗುರುತಿಸಲಾಯಿತು.** ಸದರಿ ಜಿಪಿಎ ಯನ್ನು ಮಾಡುವ ಸಮಯದಲ್ಲಿ 6 ನೇ ಪ್ರತಿವಾದಿ ಅಂದರೆ ನಿಮ್ಮ ಮಗ ಅಪ್ರಾಪ್ತ ವಯಸ್ಕರು ಇದ್ದರು ಆ ಕಾರಣ ಅವರ ಪೋಟೋ ಮತ್ತು ಸಹಿ ಪಡೆದಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಜಿಪಿಎ ಗೆ ಟಿ.ಎಂ. ಮಂಜುನಾಥ ವಕೀಲರು ಗುರುತಿಸಿ ತಮ್ಮ ರೋಲ್ ನಂಬರ್ ಬರೆದಿರುತ್ತಾರೆ ಎಂದರೆ ಸಾಕ್ಷಿ ಅದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಇನ್ನೊಬ್ಬ ಮಂಜುನಾಥ್ ರವರೂ ಸಹ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿಪಿಎ ಯನ್ನು ನೀವು ಮತ್ತು ಇತರ ಎಲ್ಲಾ ಪ್ರತಿವಾದಿಗಳು ನೋಟರಿಯವರ ಮುಂದೆ ಬರೆದು ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಪಿ-1ರ ಕರಾರುಪತ್ರವನ್ನು ಬರೆದುಕೊಟ್ಟ ದಿನದಂದೇ ಸದರಿ ನಿಪಿ-18ರ ಜಿಪಿಎ ಬರೆದುಕೊಟ್ಟು ದಾವಾಸ್ವತ್ತಿನ ಸ್ವಾಧೀನವನ್ನು ವಾದಿಗೆ ಬಿಟ್ಟು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ವಾದಿಗೆ ಕರಾರುಪತ್ರ ಮತ್ತು ಜಿಪಿಎ ಬರೆದುಕೊಟ್ಟು ಹಣವನ್ನು ಪಡೆದಿದ್ದರೂ ಸಹ ಬರೆದುಕೊಟ್ಟಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಿಪಿಎ ಯನ್ನು ಚನ್ನಬಸವಯ್ಯ

ವಕೀಲರಿಂದ ನೋಟರಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿಪಿಎ ಗಳಿಗೆ ನೀವೆಲ್ಲಾ ಸಹಿ ಮಾಡಿದ್ದರೂ ಸಹ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾವು ಮಾಡಿರುವುದಿಲ್ಲ ಎಂದು ನುಡಿಯುಿತ್ತಾರೆ.

ಈಗ ಸಾಕ್ಷಿಗೆ ದಿನಾಂಕ 19.12.2011 ರ ಧೃಡೀಕೃತ ನಕಲಿನ ಕ್ರಯಪತ್ರವನ್ನು ತೋರಿಸಲಾಗಿ ನೀವು ರಂಗನಾಥ್ ಎಂಬುವವರಿಗೆ ಸದರಿ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. **ಸದರಿ ಧೃಡೀಕೃತ ನಕಲಿನ ಕ್ರಯಪತ್ರವನ್ನು ನಿಪಿ-19 ಎಂದು ಗುರುತಿಸಲಾಯಿತು**. ಸದರಿ ಕ್ರಯಪತ್ರದಲ್ಲಿ ಇರುವ ಪೋಟೋ ಮತ್ತು ಸಹಿಗಳು ನಿಮ್ಮದು ಹಾಗೂ 1 ರಿಂದ 3 ಮತ್ತು 5ನೇ ಪ್ರತಿವಾದಿಗಳದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ಮಾಡಿಕೊಡುವ ಸಮಯದಲ್ಲೂ ಸಹ 6 ನೇ ಪ್ರತಿವಾದಿ ಅಪ್ರಾಪ್ತ ವಯಸ್ಕರಾಗಿದ್ದ ಕಾರಣ ಅವರ ಪರವಾಗಿ ನೀವೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸರ್ವೆ ನಂ.76 ರಲ್ಲಿ ನಿಮಗೆ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದರೆ ಸಾಕ್ಷಿ 2 ಎಕರೆ 31 ಗುಂಟೆ ಎಂದು ನುಡಿಯುತ್ತಾರೆ. ಸದರಿ 2 ಎಕರೆ 31 ಗುಂಟೆ ಪೈಕಿ 1 ಎಕರೆ 21 ಗುಂಟೆಯನ್ನು ನಿಪಿ-19ರ ಪ್ರಕಾರ ಸದರಿ ರಂಗನಾಥ್ ರವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ಎಕರೆ 10 ಗುಂಟೆ ಜಮೀನು ನಿಮಗೆ ಉಳಿದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ 1 ಎಕರೆ 10 ಗುಂಟೆ ಜಮೀನೇ ದಾವಾಸ್ವತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ದಿನಾಂಕ 21.11.2008 ರಂದೆ ದಾವಾಸ್ವತ್ತನ್ನು ವಾದಿಗೆ ಬರೆದುಕೊಟ್ಟಿರುವುದರಿಂದ ರಂಗನಾಥ್ ಹಾಗೂ ಬೇರೆ ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಾವು ಬರೆದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯವರ ತಂದೆ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಾದಿಯವರ ತಂದೆ ಸದರಿ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದರಿಂದ ವಿಮೆ ಪರಿಹಾರಕ್ಕಾಗಿ ಎಂ ವಿ ಎಸ್ ಪ್ರಕರಣ ದಾಖಲಿಸಿದ್ದರು ಆ ಬಗ್ಗೆ ನಿಮಗೆ ಗೊತ್ತೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ವಾದಿಗೆ ರೂ.4,48,473/- ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ಭಾಗಶಃ ಹಣ ಬಿಡುಗಡೆಯಾಗಿದ್ದು ಹಾಗೂ ಭಾಗಶಃ ಹಣ ಡೆಪಾಸಿಟ್ ಆಗಿದ್ದು ಆ ಬಗ್ಗೆಯಾ ಸಹ ನಿಮಗೆ ಗೊತ್ತಿದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆಯವರಿಗೆ ಬಂದ ವಿಮಾ ಹಣದಿಂದ ಹಾಗೂ ಅವರ ಉಳಿತಾಯದ ಹಣದಿಂದ ನಿಮಗೆ ರೂ.3ಲಕ್ಷ ಹಣವನ್ನು ಕೊಟ್ಟು ಸದರಿ ಕರಾರುಪತ್ರ ಮತ್ತು ಜಿಪಿಎ ಯನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಮುಂಗಡ ಹಣವನ್ನು ಪಡೆದು ಸದರಿ ಕರಾರುಪತ್ರವನ್ನು ಬರೆದುಕೊಟ್ಟಿದ್ದರೂ ಸಹ ಕ್ರಯಪತ್ರವನ್ನು ಬರೆದುಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-1, ನಿಪಿ-18 ಮತ್ತು 19 ರಲ್ಲಿ ಇರುವ ನಿಮ್ಮ ಮತ್ತು 1 ರಿಂದ 3 ಮತ್ತು 5 ನೇ ಪ್ರತಿವಾದಿಗಳ ಸಹಿ ಎಲ್ಲಾ ಒಂದೇ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**